O.S. No.64/2026
PW.1

ಇಂದು ದಿನಾಂಕ: 06-08-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟಿ ಸವಾಲು: 2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದ :-</u>**

ನಾನು ದೇವಸೂಗೂರಿನಲ್ಲಿ ಸುಮಾರು 26 ವರ್ಷಗಳಿಂದ ಇರುತ್ತೇನೆ. ಈ ಕೇಸನ್ನು ಸರ್ವೆ ನಂ.645 ರ ಜಮೀನಿಗೆ ಹಾಕಿರಬೇಕು. ಸದರಿ ಜಮೀನಿನ ಚಕ್ಕುಬಂದಿ ನನಗೆ ಈಗ ಹೇಳಲು ಬರುವುದಿಲ್ಲ. ದಾವಾ ಸ್ವತ್ತಿಗೆ ಕುರಿತಂತೆ ಹಿರಿಯ ಶ್ರೇಣಿ ನ್ಯಾಯಾಲಯ ಮಾನವಿಯಲ್ಲಿ ಅಸಲು ದಾವಾ ಸಂ.34/2010 ರಂತೆ ಒಂದು ದಾವೆ ಇತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರಳನ್ನಾಗಿ ಸೇರಿಸುವಂತೆ ಅರ್ಜಿ ಸಲ್ಲಿಸಿದ್ದೆ ಮತ್ತು ಸದರಿ ಅರ್ಜಿ ವಜಾಗೊಂಡಿರುತ್ತದೆ ಎಂದರೆ ಸರಿ. ನನ್ನ ತಂದೆಯ ಹೆಸರು ಈರಣ್ಣಗೌಡ ಮತ್ತು ನನ್ನ ತಾತನ ಹೆಸರು ಹಂಪನಗೌಡ. ನನ್ನ ತಂದೆಗೆ ಒಟ್ಟು 2 ಜನ ಹೆಂಡತಿಯರು ಮೊದಲನೆಯ ಹೆಂಡತಿಗೆ ಅಮರಪ್ಪ ಎನ್ನುವ ಒಬ್ಬ ಮಗ ಮತ್ತು 2 ನೇ ಹೆಂಡತಿಗೆ ಮಹಾದೇವಪ್ಪ ಮತ್ತು ಬಸವರಾಜ ಎನ್ನುವ ಇಬ್ಬರು ಗಂಡು ಮಕ್ಕಳು ಹಾಗೂ ನಾನು ಒಬ್ಬಳು ಹೆಣ್ಣುಮಗಳಾಗಿದ್ದು ನನ್ನ ತವರು ಮನೆಯಲ್ಲಿ ಶರಣಮ್ಮ ಎಂದು ಕರೆಯುತ್ತಿದ್ದರು ಆದರೆ ಗಂಡನ ಮನೆಯಲ್ಲಿ ಮಲ್ಲಮ್ಮ ಎಂದು ಕರೆಯುತ್ತಾರೆ.

ನಾನು ಹೇಳುತ್ತಿರುವ ಈರಣ್ಣ ಎನ್ನುವವರಿಗೆ ಕೇವಲ ಅಮರಣ್ಣ ಮತ್ತು ಹೈಮಾವತಿ ಎನ್ನುವವರು ಮಾತ್ರ ಮಕ್ಕಳು ಎಂದರೆ ಸರಿಯಲ್ಲ. ಈರಣ್ಣ ಕೇವಲ ಒಂದು ಮದುವೆಯಾಗಿದ್ದ ಎಂದರೆ ಸರಿಯಲ್ಲ. ದಾವಾ ಸ್ವತ್ತು ಅಮರಣ್ಣನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು 1981 ರಲ್ಲಿ ಮಾಡಿಕೊಂಡಿರುತ್ತಾನೆ ಎಂದು ಹೇಳಿರುತ್ತಾರೆ. ಸದರಿ ಅಮರಣ್ಣನಿಗೆ ಮದುವೆಯಾಗಿಲ್ಲ ಎಂದರೆ ಸರಿ. ಅಮರಣ್ಣ ವಿದ್ಯಾವಂತನಾಗಿದ್ದು ಮುಖ್ಯ ಶಿಕ್ಷಕನಾಗಿದ್ದ ಎಂದರೆ ಸರಿ.

ಸದರಿ ಅಮರಣ್ಣ ತನ್ನ ಜೀವಿತಾವಧಿಯಲ್ಲಿ ದಿ: 12-01-2022 ರಂದು ತನ್ನ ತಂಗಿಯಾದ ಹೈಮಾವತಿ ಮತ್ತು ಅವರ ಮಕ್ಕಳಾದ 2 ಮತ್ತು 3 ನೇ ಪ್ರತಿವಾದಿಗೆ ನೊಂದಾಯಿತ ವಿಲ್ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿ. ನಾವು ಒಕ್ಕಲಿಗ ಗೌಡ ಜಾತಿಗೆ ಸೇರಿದವರು.

ನನ್ನ ತಂದೆ ಈರಮ್ಮ ಎನ್ನುವವರನ್ನು 2 ನೇ ಮದುವೆಯಾಗಿದ್ದ. ಯಾವ ವರ್ಷದಲ್ಲಿ ಮದುವೆಯಾಗಿದ್ದ ಎಂದು ನನಗೆ ಗೊತ್ತಿಲ್ಲ. ಅಸಲು ದಾವೆ ಸಂ.34/2010 ರಲ್ಲಿ ಮಲ್ಲಿಕಾರ್ಜುನ ತಂದೆ ಬಸವರಾಜಪ್ಪ ಮತ್ತು

ಸುರೇಶ ಕುಮಾರ ತಂದೆ ಬಸವರಾಜಪ್ಪ ಎಂದು ಬರೆದಿತ್ತು ಎಂದರೆ ಸರಿ. ಈ ದಾವೆಯಲ್ಲಿ ಪ್ರತಿವಾದಿ ಸಂ.1(ಸಿ) ರವರ ಅಮರೇಶರೆಡ್ಡಿ ತಂದೆ ಬಸರಾಜ ಎಂದು ಬರೆಸಿರುತ್ತೇನೆ ಎಂದರೆ ಸರಿ. ಈ ದಾವೆಯಲ್ಲಿ 1(ಡಿ) ಪ್ರತಿವಾದಿಯ ಹೆಸರನ್ನು ಶರಣಪ್ಪ ತಂದೆ ಬಸವರಾಜ ಎಂದು ಬರೆಸಿರುತ್ತೇನೆ ಎಂದರೆ ಸರಿ.

ಹೈಮಾವತಿ ಎನ್ನುವವರಿಗೆ 5 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಅವರ ಹೆಸರು ಈರಮ್ಮ, ಮಲ್ಲಮ್ಮ, ಪಾರ್ವತಿ, ಶಾಂತಪ್ಪ ಮತ್ತು ಬಸವರಾಜ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಕೇವಲ ಶಾಂತಪ್ಪ ಮತ್ತು ಬಸವರಾಜನನ್ನು ಪಕ್ಷಗಾರನನ್ನಾಗಿ ಮಾಡಿದ್ದು, ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಅವರು ನನಗೆ ಗೊತ್ತಿಲ್ಲ, ಹಾಗಾಗಿ ಮಾಡಿಲ್ಲ. ದಾವಾ ಸ್ವತ್ತನ್ನು ಅಮರಪ್ಪ 2 ಮತ್ತು 3 ನೇ ಪ್ರತಿವಾದಿಗೆ ವಿಲ್ ಮುಖಾಂತರ ಬರೆದುಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಹಾಗಾಗಿ ಪಿ. ಆಂಡ್ ಎಸ್.ಸಿ. 3/2025 ನ್ನು ಸಲ್ಲಿಸಿ, ಅಲ್ಲಿ ಯಾರು ತಕರಾರನ್ನು ಸಲ್ಲಿಸದ ಕಾರಣ 2 ಮತ್ತು 3 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ನಾನು ಅದರಲ್ಲಿ ಪಕ್ಷಗಾರಳಾಗಿರಲಿಲ್ಲ. ದಾವಾ ಸ್ವ ತ್ತು 2 ಮತ್ತು 3 ನೇ ಪ್ರತಿವಾದಿಯರ ಹೆಸರಿನಲ್ಲಿದೆ ಎಂದರೆ ಸರಿ. ಈರಣ್ಣನಿಗೆ ಕೇವಲ ಒಬ್ಬರೇ ಹೆಂಡತಿ ಇದ್ದು, 2 ನೇ ಹೆಂಡತಿ ಮತ್ತು ಬೇರೆ ಯಾರು ಮಕ್ಕಳಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದು ನನಗೆ ಮತ್ತು ಅಮರಣ್ಣನಿಗೆ ಸಂಬಂಧವಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 2 ಮತ್ತು 3 ನೇ ಪ್ರತಿವಾದಿ ಉಳಿಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು 1(ಎ) ರಿಂದ 1(ಇ) ರವರೊಂದಿಗೆ ಶಾಮಿಲಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿ. 1(ಎ) ರಿಂದ 1(ಇ) ಪ್ರತಿವಾದಿಗಳಿಗೂ ಹಾಗೂ ನನಗೂ ಹಾಗೂ ಅಮರಪ್ಪ ಮತ್ತು ಈರಣ್ಣನಿಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧವಿಲ್ಲದಿದ್ದರು ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಮರಣ್ಣ ವಿಲ್ ಮಾಡಿಕೊಟ್ಟಿರುವ ಆಸ್ತಿಯನ್ನು ನಾವು ತೆಗೆದುಕೊಳ್ಳಬೇಕೆಂದು ನಮಗೆ ಯಾವುದೇ ಸಂಬಂಧವಿಲ್ಲದಿದ್ದರು ಸುಳ್ಳು ಸಂಬಂಧ ಹೇಳಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.